ಅಸಲು ದಾವಾ ಸಂಖ್ಯೆ 601/2022

**ಪಿ.ಡಬ್ಲ್ಯೂ-1**

**ದಿಃ 27–06–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ BNP ವಕೀಲರಿಂದ**

ನಾನು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನೀರು ಸರಬರಾಜು ಮಂಡಳಿಯಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯ ಶಪಥ ಪತ್ರದಲ್ಲಿ ಶೇತ್ಕಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದ್ದು, ನನಗೆ ಕೆಲಸದಲ್ಲಿ ವಾರದ ಶಿಫ್ಟ್ ಇದ್ದ ಕಾರಣ ನಾನು ಎರಡೂ ಕೆಲಸಗಳನ್ನು ಮಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ಕೂಲಿ ಕೆಲಸ ಅಷ್ಟೇ ಮಾಡುತ್ತೇನೆ, ನಾನು ಶೇತ್ಕಿ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಾನು ನಿರ್ಬಂಧಕಾಜ್ಞೆಯನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಸ್ವತ್ತಿನ ಸರ್ವೆ ನಂಬರ ನನಗೆ ಗೊತ್ತು. ಅದು ಸರ್ವೆ ನಂ.30/4 ಮತ್ತು 30/6 ಆಗಿರುತ್ತದೆ. ಸದರಿ ಆರ್.ಎಸ್.ನಂ.30/4 ರಲ್ಲಿ 19 ಗುಂಟೆ ಜಮೀನು ಇದ್ದು, ಆರ್.ಎಸ್.ನಂ.30/6 ರಲ್ಲಿಯೂ ಸಹ 19 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ಪೋಡಿಯಾದ ನಂತರ ಅದು ಆರ್.ಎಸ್.ನಂ.30/4 ಮತ್ತು 30/6 ಎಂದು ಆಗಿರುತ್ತವೆ ಎಂದರೆ ಸರಿ.

2. ಸರ್ವೆ ನಂ.30 ರಲ್ಲಿ ಒಟ್ಟು 5ಎಕರೆ–4ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಪೋಟ ಖರಾಬ 1 ಗುಂಟೆ ಇರುತ್ತದೆ. ಆರ್.ಎಸ್.ನಂ.30/1ಎ ರಲ್ಲಿ 2ಎಕರೆ 25ಗುಂಟೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ 1ಎಕರೆ 8 ಗುಂಟೆ ಜಮೀನಿನ ಬಗ್ಗೆ ಅಷ್ಟೇ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಆರ್.ಎಸ್.ನಂ.30/1ಎ ರ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಆರ್.ಎಸ್.ನಂ.30/2 1ಎಕರೆ–20ಗುಂಟೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಸೇರಿದ್ದು 30ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ಆರ್.ಎಸ್.ನಂ.30/* ರಲ್ಲಿ 3ಎಕರೆ–15ಗುಂಟೆ ಇರುತ್ತದೆ ಎಂದರೆ ಸಾಕ್ಷಿಯು ಸದರಿ ಉತಾರನಲ್ಲಿ ನಮಗೆ

ಸೇರಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆರ್.ಎಸ್.ನಂ.30/* ನ್ನು ನನಗೆ ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು, ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೇ ಸರಿ ಇದೆ.**

**Sd/-**
**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**